# ಸೋನಾಕ್ಷಿ ಸಂಭ್ರಮ



**ಬಾಲಿವುಡ್‌ನಲ್ಲೀಗ** ಸೋನಾಕ್ಷಿಯದ್ದೇ ಸುದ್ದಿ. ದಭಾಂಗ್ ಚಿತ್ರದ ಯಶಸ್ಸಿನ ಪಾಲು ಸಲ್ಮಾನ್‌ಗಿಂತ ಹೆಚ್ಚಾಗಿ ಸೋನಾಕ್ಷಿಗೇ ಸಿಕ್ಕಿದಂತೆ ಕಾಣುತ್ತಿದೆ. ಬಾಲಿವುಡ್‌ನ ಬಹುತೇಕ ನಿರ್ಮಾಪಕರು ಕಾಲ್‌ಶೀಟ್ ಕೋರಿ ಸೋನಾಕ್ಷಿಯ ಮನೆ ಮುಂದೆ ಕ್ಯೂ ನಿಂತಿದ್ದಾರೆ. ಜಾಹೀರಾತು ಸಂಸ್ಥೆಗಳೂ ಸೋನಾಕ್ಷಿಯ ಜತೆ ಒಪ್ಪಂದಕ್ಕೆ ಉತ್ಸುಕತೆ ತೋರಿವೆ. ಪರ್ಹಾ ಖಾನ್ ನಿರ್ದೇಶನದಲ್ಲಿ 'ಜೋಕರ್' ಚಿತ್ರದಲ್ಲಿ ಸೋನಾಕ್ಷಿ ಐಟಂ ಸಾಂಗ್‌ನಲ್ಲಿ ಕುಣಿಯಲಿದ್ದಾಳೆ ಎಂಬುದು ಹಳೇ ಸುದ್ದಿ. ಆ ಹಾಡಿನಲ್ಲಿ ಈಗ ಸೋನಾಕ್ಷಿ ಜತೆಗೆ ಕತ್ರೀನಾ ಕೂಡಾ ಕುಣಿಯಲಿದ್ದಾಳೆ ಎನ್ನುವುದು ಖಚಿತವಾಗಿದೆ. ಇಬ್ಬರು ಸೆಕ್ಸೀ ನಟಿಯರ ಐಟಂ ಸಾಂಗ್ ಭಾರವನ್ನು ಕಾತರದಿಂದ ಕಾಪರ್ಹಾ ಖಾನ್‌ಳ 'ಮೈ ನೇಮ್ ಈಸ್ ಶೀಲಾ' ಹಾಡಿನಲ್ಲಿ ಕುಣಿದು ಸಖತ್ ಸುದ್ದಿಯಾದ ಕತ್ರೀನಾಳ ಪೈಪೋಟಿಯನ್ನು ಎದುರಿಸಲು ಸೋನಾಕ್ಷಿ ಸಿದ್ಧಳಿದ್ದಾಳಂತೆ. 'ಐಟಂ ಸಾಂಗ್‌ನಲ್ಲಿ ಕುಣಿಯಲು ಯಾವುದೇ ಭಿಡೆಯಿಲ್ಲ. ನನ್ನ ನೃತ್ಯದ ಸಾಮರ್ಥ್ಯ ಎಲ್ಲರಿಗೂ ಪರಿಚಯವಾಗಲಿ' ಎಂದಿದ್ದಾಳೆ ಸೋನಾಕ್ಷಿ. 'ಈ ಐಟಂ ಸಾಂಗ್‌ನಲ್ಲಿ ಜಾನಪದ ನೃತ್ಯದ ಮಟ್ಟುಗಳಿವೆ' ಎಂಬ ಫರ್ಹಾ ಖಾನ್ ಹೇಳಿಕೆ, ಇನ್ನಷ್ಟು ಕುತೂಹಲ ಮೂಡಿಸಿದೆ. ಈ ಮಧ್ಯೆ ಕತ್ರೀನಾ ಕೈಫ್ ಮಾಡೆಲ್ ಆಗಿ ಟಿ.ವಿ ಯಲ್ಲಿ ಬರುತ್ತಿದ್ದ ಸೋಪ್ ಒಂದರ ಜಾಹೀರಾತು ಈಗ ಸೋನಾಕ್ಷಿಯ ಪಾಲಾಗಿದೆ. ಪ್ರತಿಷ್ಠಿತ ಕಂಪೆನಿಯ ಈ ಜಾಹೀರಾತಿನಲ್ಲಿ ಈವರೆಗೆ ಬರುತ್ತಿದ್ದ ಕತ್ರೀನಾಳನ್ನು ಸೋನಾಕ್ಷಿ ಸ್ಥಳಾಂತರ ಮಾಡಿರುವುದು ಸೋನಾಕ್ಷಿಯ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಿದೆ. 'ಕತ್ರೀನಾಳ ಶೂನಲ್ಲಿ ನನ್ನ ಕಾಲು ತೂರಿಸಲು ಸಂತೋಷವಾಗುತ್ತಿದೆ' ಎಂದು ಸೋನಾಕ್ಷಿ ಸ್ವತಃ ಹೇಳಿಕೆ ನೀಡಿದ್ದು, ಬಾಲಿವುಡ್‌ನ ಬಹುತೇಕ ನಿರ್ಮಾಪಕರೀಗ ಸೋನಾಕ್ಷಿ ಕಡೆಗೇ ಹೆಚ್ಚು ವಾಲುತ್ತಿದ್ದಾರೆ.

# ನಯನತಾರಾ ಗುಡ್‌ಬೈ?



**ದ**ಕ್ಷಿಣ ಭಾರತದ ಚತುರ್ಭಾಷೆಯ ಚಿತ್ರಗಳಲ್ಲಿ ಸಖತ್ ಮಿಂಚುತ್ತಿರುವ ನಯನ ತಾರಾ, ಸಿನಿಮಾ ರಂಗಕ್ಕೆ ಗುಡ್‌ಬೈ ಹೇಳಲಿದ್ದಾಳೆಯೆ.. ಎನ್ನುವುದೀಗ ಎಲ್ಲೆಡೆ ಚರ್ಚೆಯ ವಿಷಯವಾಗಿದೆ. 'ನಯನತಾರಾ ಶೀಘ್ರವೇ ಚಿತ್ರರಂಗಕ್ಕೆ ಗುಡ್‌ಬೈ ಹೇಳಿ, ಸಂಸಾರ ಹೂಡಲಿದ್ದಾಳೆ' ಎನ್ನುವ ಗಾಸಿಪ್ ಎಲ್ಲೆಡೆ ಹಬ್ಬಿದೆ. ಸುದ್ದಿ ಓದಿದ ನಯನ ತಾರಾ 'ಎಲ್ಲ ಸುಳ್ಳು' ಎನ್ನುತ್ತಿದ್ದಾಳೆ. ಆದರೆ ಜನ ನಂಬಲು ತಯಾರಿಲ್ಲ.

ಹಾಗೆ ನಂಬದಿರಲು ಕಾರಣವೂ ಇದೆ. ನಯನತಾರಾಳ ಪ್ರೇಮಿ ಡ್ಯಾನ್ಸಿಂಗ್ ಸ್ಟಾರ್ ಪ್ರಭುದೇವ ಈಗಾಗಲೆ ಮೊದಲ ಹೆಂಡತಿಯ ಜತೆಗಿನ ಜಗಳಕ್ಕೆ ಮುಕ್ತಾಯ ಹಾಡಿ ಪರಿಹಾರವನ್ನೂ ಕೊಟ್ಟು ಕೈತೊಳೆದುಕೊಂಡಿದ್ದಾನೆ. ಈ ಇಬ್ಬರೂ ಗುಟ್ಟಾಗಿ ಮದುವೆಯಾಗಿದ್ದಾರೆಂಬ ಸುದ್ದಿಯೂ ಇದೆ. ಇದರ ಬೆನ್ನಲ್ಲೆ ನಯನತಾರಾಳ ಸಂಸಾರದ ಗಾಸಿಪ್ ಹರಡಿದೆ.

2009ರಲ್ಲಿ ನಟಿಸಿದ ಚಿತ್ರಗಳೆಲ್ಲ ಫ್ಲಾಪ್ ಆಗಿ ಕಂಗಾಲಾಗಿದ್ದ ನಯನತಾರಾ, 2010ರಲ್ಲಿ ನಟಿಸಿದ ನಾಲ್ಕು ಭಾಷೆಯ ನಾಲ್ಕೂ ಚಿತ್ರಗಳು ಹಿಟ್ ಆಗಿವೆ. ತಮಿಳಿನ 'ಬಾಸ್ ಎಂಗಿರ ಭಾಸ್ಕರನ್', ಮಲಯಾಳಂನ 'ಬಾಡಿಗಾರ್ಡ್', ಕನ್ನಡದ 'ಸೂಪರ್' ಮತ್ತು ತೆಲುಗಿನ 'ಸಿಂಗ' ಚಿತ್ರಗಳ ನಾಯಕಿ ಆಗಿರುವ ನಯನತಾರಾ ಈ ಬಾಕ್ಸಾಫೀಸ್ ಫಲಿತಾಂಶದಿಂದ ಸಖತ್ ಖುಷಿಯಾಗಿದ್ದಾಳೆ. ಆದರೆ ನಾಲ್ಕೂ ಚಿತ್ರಗಳಲ್ಲಿ ಯಶಸ್ಸಿನ ಪಾಲು ಆಯಾ ಹೀರೋಗಳಿಗೇ ಸಂದಿದೆ ಎನ್ನುವುದು ಇಲ್ಲಿಯ ವಿಶೇಷ. 'ಅದಕ್ಕೆಂದೇ ನಯನತಾರಾ ನಿವೃತ್ತಿಯ ಮನಸ್ಸಾಗಿದೆ' ಎನ್ನುತ್ತಿದೆ ಆಕೆಯ ಆಪ್ತ ವಲಯ. 'ಕೀರ್ತಿಯ ಶಿಖರಲ್ಲಿರುವಾಗಲೇ ಗುಡ್‌ಬೈ ಹೇಳೋದು ಜಾಣೆಯರ ಲಕ್ಷಣ' ಎಂದು ಪ್ರಭುದೇವ ಕೂಡಾ ಕಿವಿಮಾತು ಹೇಳಿದ್ದಾನಂತೆ. ಅದಕ್ಕೆ ತಕ್ಕಂತೆ ಇತ್ತೀಚೆಗೆ ಬಂದ ಹೊಸ ಸಿನಿಮಾಗಳ ಒಂದೆರಡು ಆಫರ್‌ಗಳನ್ನು ನಯನತಾರಾ ತಿರಸ್ಕರಿಸಿದ್ದಾಳೆಂದೂ ಸುದ್ದಿ ಹಬ್ಬಿದೆ.

■ ಬಿಂದು